

ಪಶ್ಚಿಮ ಘಟ್ಟಗಳ ಉದ್ದಾನುದ್ದ ಕಣಿವೆಗಳನ್ನು ಸೃಷ್ಟಿಸಿದ ನಿಬಿಡ ಪರ್ವತಗಳ ಅಕ್ಕಪಕ್ಕದ ಸಾಲು. ಕಣಿವೆಯ ಅಗಾಧ ತಳಭಾಗದಲ್ಲಿ ವರುಷದ ಮುನ್ನೂರರವತ್ತೈದೂ ದಿನ ಸಶಬ್ದವಾಗಿ ಹರಿಯುವ ನೀರು. ಇಕ್ಕೆಲಗಳಲ್ಲಿ ಅಲ್ಲಲ್ಲಿ ಮನೆ, ತೋಟ, ಜನವಸತಿಯ ಕುರುಹು. ಕೇರಿಯ ಮನೆಗಳ ಸಂಖ್ಯೆ ಎರಡಷ್ಟೇ. ಪ್ರಪಾತವನ್ನು ಸಮತಟ್ಟುಗೊಳಿಸಿದ ಚಿಕ್ಕ ಜಾಗದಲ್ಲಿ ಮನೆ. ಕೊಟ್ಟಿಗೆಯಲ್ಲಿ ದನಕರುಗಳು. ಮೊಬೈಲಿಗೆ ಸಿಗ್ನಲ್‌ನ ಹಂಗಿಲ್ಲ. ಚಲಿಸುವ ದಾರಿ ದುರ್ಲಭವಾಗಿರುವಾಗ ಆಧುನಿಕ ಸಂಪರ್ಕದ ಹೊಸ ಸಾಧ್ಯತೆಗಳು ದೂರ. ಇಡಗುಂದಿ ಭಾಗದಿಂದ ಕಳಚೆ ಮಾರ್ಗವಾಗಿಯೂ, ಕೊಡ್ಲಗದ್ದೆ ಭಾಗದಿಂದ ತಳಕೆಬೈಲ್ ಘಟ್ಟ ಹತ್ತಿಯೂ ಸ್ವಲ್ಪ ಕಷ್ಟಪಟ್ಟು ತಲುಪಬೇಕಾದ ಉತ್ತರ ಕನ್ನಡದ ಯಲ್ಲಾಪುರ ತಾಲೂಕಿನ ಕಳಚೆ ಗ್ರಾಮ ವ್ಯಾಪ್ತಿಯ ಕೋಮಾರಕುಂಬ್ರಿಯನ್ನು ಶಬ್ದಗಳಲ್ಲಿ ಹೀಗೆ ಕಟ್ಟಬಹುದು.

ಕೋಮಾರ ಕುಂಬ್ರಿಗೆ ಹೋಗಬೇಕೆಂಬ ಸುಮಾರು ವರ್ಷಗಳ ನಿಶ್ಚಯವನ್ನು ಸಾಧ್ಯವಾಗಿಸಿದ್ದು ಕೊರೊನಾ ಲಾಕ್‌ಡೌನ್. ಎರಡು ದಿನಗಳ ಸತತ ಪ್ರಯತ್ನದಿಂದ ನಾನು ಮತ್ತು ಅಣ್ಣ ಪ್ರಶಾಂತ ಬರುವ ಸುದ್ದಿ ಸುಬ್ಬಣ್ಣನ ಮನೆ ತಲುಪಿತು. ನಮ್ಮ ಕೋಮಾರಕುಂಬ್ರಿ ಭೇಟಿಯ ಹಿಂದಿನ ಉದ್ದೇಶ ಅರಿತು, 'ಮುದ್ದಾಂ ಬನ್ನಿ' ಎಂದು ಪ್ರೀತಿಯ ಆಹ್ವಾನವನ್ನಿತ್ತರು ಸುಬ್ಬಣ್ಣ. ತಳಕೆಬೈಲ್ ಘಟ್ಟ ಹತ್ತಿದ ಸುಸ್ತನ್ನು ಹೇಳ ಹೆಸರಿಲ್ಲದಂತೆ ಮಾಯವಾಗಿಸಿದ್ದು ಗುಡ್ಡೆಯ ಇಕ್ಕೆಲಗಳಿಂದ ಧುಮುಕುವ ಫ್ರಿಜ್ಜಿಗೆ ಸೆಡ್ಡು ಹೊಡೆಯುವಷ್ಟು ತಣ್ಣನೆ ಮಾಯಕದ ನೀರು ಮತ್ತು ಸುಬ್ಬಣ್ಣನ ಕುಟುಂಬದ ಲವಲವಿಕೆಯ ಸ್ವಾಗತ.

ಕೊಡ್ಲಗದ್ದೆ ಎಂಬ ಹಿರಿದಾದ ಊರಿನ ಬುಡ ಕೋಮಾರ ಕುಂಬ್ರಿ. ಅಂಕೋಲಾ ಮತ್ತು ಯಲ್ಲಾಪುರ ಎರಡೂ ತಾಲ್ಲೂಕಿಗೆ ಹಂಚಿಹೋಗಿರುವ ಕೊಡ್ಲಗದ್ದೆಯ ನೀರಿನ ಗುಟ್ಟು ಕೋಮಾರ ಕುಂಬ್ರಿಯಲ್ಲಿ ಅಡಗಿದೆ. ಸುಬ್ಬಣ್ಣನ ತೋಟದ ಗಡಿಭಾಗದ ಮೂಲೆಯಲ್ಲಿ ತಣ್ಣಗೆ ಸದಾಕಾಲ ಒದ್ದೆಯಾಗಿಯೇ ಇರುವ ಮಣ್ಣು ಮತ್ತು ಮಣ್ಣಿನ ಮೇಲೆ ಉದುರಿ ಬಿದ್ದ ತರಗೆಲೆಗಳ ನಡುವೆ ಕೊಡ್ಲಗದ್ದೆಯ ನೀರಿನ ಜಾಗೃತ ವರತೆಯಿದೆ. ಅದೇ ಒದ್ದೆ, ಸ್ವಲ್ಪ ಮುಂದುವರೆದು ಸುಬ್ಬಣ್ಣನ ತೋಟದಲ್ಲಿ ಝರಿಯಾಗಿ ಪ್ರತ್ಯಕ್ಷವಾಗುತ್ತದೆ.

ಸುಬ್ಬಣ್ಣನಿಗೆ ಪೀಳಿಗೆಯಿಂದ ಬಂದ ಭೂಮಿ ಕೋಮಾರಕುಂಬ್ರಿ. ಇಕ್ಕಟ್ಟಿನ ಕಣಿವೆ ಜಾಗ, ಒಂದು ಬದಿಯ ಮೂಲೆ, ಸಂಪರ್ಕ ದುರ್ಲಭ, ಬಿಡುವಿನ ವೇಳೆಯಲ್ಲಿ ಹೇಳಿಕೊಳ್ಳಲು ಸುತ್ತ ನಾಲ್ಕಾರು ಮನೆಗಳಿಲ್ಲ, ಕೃಷಿ ಕೂಲಿಗೆ ಹತ್ತಿರದಲ್ಲಿ ಒದಗುವವರಿಲ್ಲ. ನೀರೊಂದನ್ನು ಬಿಟ್ಟರೆ ಮತ್ತೇನೂ ಇಲ್ಲ ಎಂಬ ನೂರೆಂಟು ತರಹೇವಾರಿ ಸಮಸ್ಯೆಗಳಿಂದ ಯಾರಿಗೂ ಮನಸಿರದ ಜಮೀನು ಸುಬ್ಬಣ್ಣನ ಕೈಹಿಡಿಯಿತು. ಆ ಕಾಲಕ್ಕೆ ಕಾಲುಹಾದಿಯೊಂದೇ ಕೋಮಾರ ಕುಂಬ್ರಿ ತಲುಪುವ ಮಾರ್ಗವಾಗಿತ್ತು. ಕೃಷಿ ಉತ್ಪನ್ನಗಳನ್ನು ಸಾಗಿಸುವುದು ಸಾಹಸವೇ ಆಗಿತ್ತು. ಸಾಹಸೀ ಪ್ರವೃತ್ತಿಯ ಸುಬ್ಬಣ್ಣನಿಗೆ ಇವು ಗುರಿಯಾಗಿ ಕಂಡಿತು.



ಪತ್ನಿಯೊಂದಿಗೆ ಕೋಮಾರ ಕುಂಬ್ರಿ ಸುಬ್ಬಣ್ಣ

## ಸ್ವಾವಲಂಬನೆಯ ಮಂತ್ರ

ಎಲ್ಲರಿಗೂ ಪೇಟೆಗೆ ಹತ್ತಿರವೇ ಬದುಕಬೇಕೆಂಬ ಆಸೆ. ಆದಷ್ಟು ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಊರಲ್ಲೇ ಉಳಿಯಬೇಕೆಂಬ ತವಕ. ಕಾಡೇ ಊರಾಗಿರುವಂತವ ಜಾಗ ತಮ್ಮ ಪಾಲಿಗೆ ಬಂದಾಗ ಸುಬ್ಬಣ್ಣ ಅಳುಕಲಿಲ್ಲ. ಅದನ್ನೇ ಒಂದು ಸವಾಲಾಗಿ ಸ್ವೀಕರಿಸಿದರು. ಅಭಿವೃದ್ಧಿಯ ದಿಸೆಯಲ್ಲಿ ಗಾಂಧೀಜಿ ಹೇಳಿದ ಗ್ರಾಮ ಸ್ವರಾಜ್ಯ ಮತ್ತು ಸ್ವಾವಲಂಬಿ ತತ್ವಗಳನ್ನು ಕೋಮಾರಕುಂಬ್ರಿ ಸುಬ್ಬಣ್ಣ ಅರಿವಿಲ್ಲದೆ ಪಾಲಿಸಿದ್ದಾರೆ.

ಸ್ವಾವಲಂಬಿತನ ಅವರಿಗೆ ಅನಿವಾರ್ಯ ಕೂಡ ಆಗಿತ್ತು. ಅವರಿಗೆ ಹೊಸದೇನಾದರೂ ಕಂಡರೆ ಮೊದಲಿಂದಲೂ ತಮ್ಮಲ್ಲಿ ಅಳವಡಿಸಿಕೊಳ್ಳುವ ಉತ್ಸಾಹ. ಕಾಲು ಶತಮಾನದ ಹಿಂದೆ ವಿದ್ಯುತ್ ಎಂಬ ಮಾಯಕ ಕೋಮಾರಕುಂಬ್ರಿಯನ್ನು ಪ್ರವೇಶಿಸಿರಲಿಲ್ಲ. ಸುಬ್ಬಣ್ಣ ಪೇಟೆಯಲ್ಲಿ ಲಭಿಸುವ ಸೌಕರ್ಯಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಕೋಮಾರಕುಂಬ್ರಿಯಲ್ಲಿ ಹೇಗಾದರೂ ಲೈಟ್ ಉರಿಯಬೇಕೆಂದು ಸಂಕಲ್ಪ ತೊಟ್ಟಿದ್ದರು. ಆದರೆ ದುರ್ಗಮ ಕಾಡು ಮತ್ತು ಸಂಪರ್ಕ ವ್ಯವಸ್ಥೆಯ ಕೊರತೆಯಿಂದ ಮನೆಯಲ್ಲಿ ಬಲ್ಬ್ ಹೊತ್ತಿಸುವ ಯಾವ ಲಕ್ಷಣಗಳೂ ಇರಲಿಲ್ಲ. ಸೈಕಲ್ ಮತ್ತು ಕಾರಿನ ಡೈನಮೊ ತರಿಸಿ ಮನೆಯಲ್ಲೇ ಡಿ.ಸಿ. ಕರೆಂಟ್ ಉತ್ಪಾದಿಸಿ ಬಳಸಲಾರಂಭಿಸಿದರು. ಆದರೆ ನಿರ್ವಹಣೆ ಸವಾಲಾಗಿತ್ತು.

## ಕೈಕಟ್ಟಿ ಕೂರಲಿಲ್ಲ...

ಎತ್ತರದಿಂದ ಹರಿದುಬರುವ ಅಂತರ್ಜಲದ ವಿಪುಲ ನೀರನ್ನು ಗಮನಿಸಿದ ಸುಬ್ಬಣ್ಣನಿಗೆ ಥಟ್ಟನೆ ಹೊಸ ಉಪಾಯ ಹೊಳೆಯಿತು. ಯಾಕೆ ಅದೇ ನೀರನ್ನು ಬಳಸಿ ಸ್ವಂತ ವಿದ್ಯುತ್ ಉತ್ಪಾದಿಸಬಾರದು? ನೀರಿನ ವೇಗ, ಲಭ್ಯತೆ ಮತ್ತು ಪರರ ಹಂಗು ಬಯಸದ ಸ್ವಾವಲಂಬಿ ಮನೋಭಾವ ಸ್ವತಃ ವಿದ್ಯುತ್ ಉತ್ಪಾದಿಸಲು ಹುರುಪು ಕೊಟ್ಟಿತು.

ಸುಬ್ಬಣ್ಣನ ತೋಟದ ಬುಡದಲ್ಲಿ ಹುಟ್ಟಿ ತೋಟದ ಗುಂಟವೇ ರಭಸದಿಂದ ಸಾಗುವ ಕೊಡ್ಲಗದ್ದೆಯ ಹಳ್ಳ ಉಂಟಾಗುವ ನೀರಿನ ಮೂಲದ ಸದುಪಯೋಗ ಪಡೆಯುವ ಪ್ರಯತ್ನಕ್ಕೆ ಸುಬ್ಬಣ್ಣ ತೊಡಗಿಬಿಟ್ಟರು. ಹತ್ತಿರದ ಊರುಗಳಾದ ಕೈಗಡಿ, ಮತ್ತಿಘಟ್ಟ ಮೊದಲಾದೆಡೆ ಸ್ವಂತ ವಿದ್ಯುತ್ ಉತ್ಪಾದಿಸುವ ಪ್ರಯೋಗ ನಡೆದ ಸುದ್ದಿ ತಿಳಿಯಿತು. ಕದ್ರಾ ಅಣೆಕಟ್ಟಿನಲ್ಲಿ ಅಧಿಕಾರಿಯಾಗಿದ್ದ ಕುಟುಂಬದ ಆಪ್ತರೊಬ್ಬರು ತಾಂತ್ರಿಕ ಮಾಹಿತಿ ನೀಡಿದರು. ಅಗತ್ಯ ಸಲಕರಣೆಗಳನ್ನು ಖರೀದಿಸಲು ಆಗಿನ ದೊಡ್ಡಪೇಟೆಯಾದ ಹುಬ್ಬಳ್ಳಿಗೆ ಓಡಿದರು. ಕೊನೆಗೆ ಕೊಯಂಬತ್ತೂರಿನಲ್ಲಿ ಅಗತ್ಯ ಸಾಮಾಗ್ರಿಗಳು ದೊರಕಿದವು. 24 ವರ್ಷಗಳ ಹಿಂದೆ ಸುಮಾರು 80 ಸಾವಿರ ವ್ಯಯಿಸಿ ಟರ್ಬನ್, ಡೈನಮೊ ಅಳವಡಿಸಿಯೇಬಿಟ್ಟರು ಸುಬ್ಬಣ್ಣ.